ದಿನಾಂಕಃ **24.8.2026** ಎಲ್ ಎ ಸಿ ನಂಃ **8/2023** ಪಿಡಬ್ಲ್ಯೂಃ **1**

**ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಎದುರುದಾರರ ಪರವಾಗಿ ಶ್ರೀಮತಿ ಜಿಲ್ಲಾ ಸರ್ಕಾರಿ ವಕೀಲರಿಂದ**

ಈ ಕೇಸು ಹಾಕಿದ ನಂತರ ನಿಪಿ-20 ರ ಬಗ್ಗೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ನಿಪಿ-21 ರಿಂದ 27 ನಕಾಶೆಗಳು ನಮ್ಮ ಸಂಪೂರ್ಣ ಗ್ರಾಮಕ್ಕೆ ಸಂಬಂಧಪಟ್ಟಿವೆ ಎಂದರೆ ಸರಿ. ಆ ನಕಾಶೆಗಳು ಮೊದಲಿಂದಂ ಅಸ್ತಿತ್ವದಲ್ಲಿವೆ ಎಂದರೆ ಸರಿ. ನಮ್ಮ ಜಮೀನುಗಳ ವಾಸ್ತವಿಕ ಅಂಶಗಳನ್ನು ಪರಿಶೀಲನೆ ಮಾಡಿಯೇ ಎದುರುದಾರರು ನ್ಯಾಯಾಯುತ ಪರಿಹಾರವನ್ನು ನಿಗದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-28 ರ ನಕಾಶೆಗಳಲ್ಲಿ ನಮ್ಮ ಜಮೀನು ಕೂಡ ಕಾಣಿಸುತ್ತದೆ. ಕೇವಲ ಹೆಚ್ಚಿನ ಪರಿಹಾರ ಪಡೆಯಬೇಕೆನ್ನುವ ಉದ್ದೇಶದಿಂದ ಈ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**